

بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ದಂಡಯಾತ್ರೆಗಳ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **18–04–2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಹಝ್ರತ್ ಪೈಗಂಬರ್(ಸ)ರ ಚರಿತ್ರೆಗೆ ಸಂಬಂಧಪಟ್ಟು ಇನ್ನಷ್ಟು ಕೆಲವು ಯುದ್ಧಗಳ ಮತ್ತು ಕಾರ್ಯಾಚರಣೆಗಳ ಬಗ್ಗೆ ಇಂದು ನಾನು ಪ್ರಸ್ತಾಪಿಸಲಿದ್ದೇನೆ. ಚರಿತ್ರೆಯಲ್ಲಿ ತುರ್ಬಾದ ಕಡೆಗೆ ಹಝ್ರತ್ ಉಮರ್ ಬಿನ್ ಖತ್ತಾಬ್(ರ) ನಡೆಸಿದ ಕಾರ್ಯಾಚರಣೆಯ ಉಲ್ಲೇಖವೂ ಇದೆ. ಈ ದಂಡಯಾತ್ರೆ ಹಿಜರಿ 7ರ ಶಅಬಾನ್‌ನಲ್ಲಿ ನಡೆಯಿತು. ಹಝ್ರತ್ ಪೈಗಂಬರ್(ಸ) ಹಝ್ರತ್ ಉಮರ್ ಬಿನ್ ಖತ್ತಾಬ್(ರ)ರನ್ನು ತುರ್ಬಾ ಎಂಬ ಸ್ಥಳದ ಕಡೆಗೆ ಹವಾಝಿನ್ ಗೋತ್ರದ ವಿರುದ್ಧ ಮೂವತ್ತು ಜನರೊಂದಿಗೆ ಕಳುಹಿಸಿದರು. ಈ ದಂಡೆಯಾತ್ರೆಯನ್ನು ಕಳುಹಿಸಲು ಕಾರಣವೆಂದರೆ, ತುರ್ಬಾದ ಕಡೆಯಿಂದ ಇಸ್ಲಾಂ ವಿರುದ್ಧ ಪಿತೂರಿಗಳ ಮಾಹಿತಿ ಹಝ್ರತ್ ಪೈಗಂಬರ್(ಸ)ರಿಗೆ ಲಭಿಸಿತ್ತು. ಹೀಗೆ ಹಝ್ರತ್ ಉಮರ್(ರ) ಹೊರಟರು, ತುರ್ಬಾದ ಜನರಿಗೆ ಈ ಸುದ್ದಿ ತಿಳಿದಾಗ ಅವರು ಅಲ್ಲಿಂದ ಓಡಿಹೋದರು. ಹಝ್ರತ್ ಉಮರ್(ರ) ಅವರ ಪ್ರದೇಶವನ್ನು ತಲುಪಿದರು, ಆದರೆ ಅಲ್ಲಿ ಯಾರೂ ಇರಲಿಲ್ಲ, ಅವರ ಎಲ್ಲ ಸಂಪತ್ತು, ಜಾನುವಾರುಗಳು ಇತ್ಯಾದಿ ಅಲ್ಲಿಯೇ ಇದ್ದವು. ಈ ಜನರು ದುಷ್ಟರಾಗಿದ್ದ ಕಾರಣದಿಂದ ಹಝ್ರತ್ ಉಮರ್(ರ) ಆ ಎಲ್ಲ ಸಂಪತ್ತನ್ನು ವಶಪಡಿಸಿಕೊಂಡು ಹಿಂತಿರುಗಿದರು.

ಅನಂತರ ಹಝ್ರತ್ ಬಶೀರ್ ಬಿನ್ ಸಅದ್(ರ) ಫದಕ್‌ನಲ್ಲಿ ಬನೂ ಮುರ್ರ ಕಡೆಗೆ ನಡೆಸಿದ ದಂಡೆಯಾತ್ರೆ ಆಗಿದೆ. ಈ ದಂಡೆಯಾತ್ರೆ ಹಿಜರಿ 7ರ ಶಅಬಾನ್‌ನಲ್ಲಿ ಹಝ್ರತ್ ಬಶೀರ್ ಬಿನ್ ಸಅದ್(ರ)ರ ನೇತೃತ್ವದಲ್ಲಿ ನಡೆಯಿತು. ಈ ದಂಡೆಯಾತ್ರೆಯ ವಿವರಣೆಯನ್ನು ಹೀಗೆ ನೀಡಲಾಗಿದೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಬಶೀರ್ ಬಿನ್ ಸಅದ್(ರ)ರನ್ನು ಮೂವತ್ತು ಸಹಾಬಿಯರೊಂದಿಗೆ ಫದಕ್‌ನ ಬನೂ ಮುರ್ರ ಗೋತ್ರದ ಕಡೆಗೆ ಕಳುಹಿಸಿದರು. ಜನರು ಇಸ್ಲಾಂ ವಿರುದ್ಧ ಪಿತೂರಿ ಮಾಡುತ್ತಿದ್ದಾರೆ ಎಂಬ ಸುದ್ದಿ ಬರುವಾಗಲೇ ಹಝ್ರತ್ ಪೈಗಂಬರ್(ಸ) ಅಂತಹ ಜನರ ಕಾರ್ಯಾಚರಣೆಗಳಿಗಾಗಿ ಅಥವಾ ಯುದ್ಧಕ್ಕಾಗಿ ತಂಡಗಳನ್ನು ಕಳುಹಿಸುತ್ತಿದ್ದರು. ಅಂತೂ ಸಹಾಬಿಯರು ಹೊರಟುಹೋದರು. ಅಲ್ಲಿ ಕುರಿ ಕಾಯುವವರನ್ನು ಭೇಟಿಯಾದರು ಮತ್ತು ಬನೂ ಮುರ್ರ ಗೋತ್ರದ ಬಗ್ಗೆ ವಿಚಾರಿಸಿದರು. ಬನೂ ಮುರ್ರ ತಮ್ಮ ಕಣಿವೆಯಲ್ಲಿದ್ದಾರೆ ಮತ್ತು ಕಾರಂಜಿಯ ಬಳಿಗೆ ಬಂದಿಲ್ಲ ಎಂದು ಅವರು ತಿಳಿಸಿದರು. ಸಹಾಬಿಯರು ಅವರ ಕುರಿಗಳನ್ನು ಓಡಿಸಿಕೊಂಡು ಮದೀನಾದ ಕಡೆಗೆ ಹಿಂತಿರುಗಿದರು. ಆಗ ಬನೂ ಮುರ್ರ ಗೋತ್ರದ ಘೋಷಕ ಕೂಗಿಕೊಂಡು ಈ ಘಟನೆಯ ಸುದ್ದಿಯನ್ನು ತಿಳಿಸಿದನು. ಆಗ ಬನೂ ಮುರ್ರ ಗೋತ್ರದವರು ಹಿಂತಿರುಗಿದರು ಮತ್ತು ಮುಸ್ಲಿಮರ ಮೇಲೆ ದೊಡ್ಡ ಸೈನ್ಯದೊಂದಿಗೆ ದಾಳಿ ಮಾಡಿದರು. ಇಡೀ ರಾತ್ರಿ ಬಾಣಗಳು ಮುಗಿಯುವ ವರೆಗೂ ಮುಸ್ಲಿಮರು ಬಾಣಗಳನ್ನು ಎಸೆದರು. ಬೆಳಿಗ್ಗೆಯಾದಾಗ ಬನೂ ಮುರ್ರ ಗೋತ್ರದವರು ಮತ್ತೆ ದಾಳಿ ಮಾಡಿದರು ಹಾಗೂ ಹಝ್ರತ್ ಬಶೀರ್(ರ)ರ ಸಹಚರರನ್ನು ಶಹೀದ್ ಮಾಡಿದರು. ಗಾಯಗೊಂಡು ಬೀಳುವ ವರೆಗೂ ಹಝ್ರತ್ ಬಶೀರ್(ರ) ಆ ಜನರೊಂದಿಗೆ ತೀವ್ರವಾಗಿ ಹೋರಾಡುತ್ತಲೇ ಇದ್ದರು. ಅವರ ಕಣಕಾಲು ಗಾಯಗೊಂಡಿತು. ಅವರು ಮೃತಪಟ್ಟಿದ್ದಾರೆಂದು ಭಾವಿಸಲಾಯಿತು. ಆದರೆ ಅವರು ಸುರಕ್ಷಿತರಾಗಿದ್ದರು. ಅನಂತರ ಬನೂ ಮುರ್ರ ತಮ್ಮ ಕುರಿ ಮತ್ತು ಮೇಕೆಗಳನ್ನು ತೆಗೆದುಕೊಂಡು ಹಿಂತಿರುಗಿದರು.

ಅನಂತರ ಹಝ್ರತ್ ಗ಼ಾಲಿಬ್ ಬಿನ್ ಅಬ್ದುಲ್ಲಾ ಲೇಸಿ(ರ) ಮಿಫಾ ಕಡೆಗೆ ನಡೆಸಿದ ದಂಡೆಯಾತ್ರೆಯ ಉಲ್ಲೇಖವಿದೆ. ಈ ದಂಡೆಯಾತ್ರೆ ಹಿಜರಿ 7ರ ರಮಝಾನ್‌ನಲ್ಲಿ ನಡೆಯಿತು. ಇಬ್ನ್ ಸಅದ್ ಹೀಗೆ ಬರೆದಿದ್ದಾರೆ: ಹಝ್ರತ್ ಪೈಗಂಬರ್(ಸ) ಹಝ್ರತ್ ಗ಼ಾಲಿಬ್ ಬಿನ್ ಅಬ್ದುಲ್ಲಾ ಲೇಸಿ(ರ)ರನ್ನು ಮಿಫಾದಲ್ಲಿದ್ದ ಬನೂ ಅವ್ವಾಲ್ ಮತ್ತು ಬನೂ ಅಬ್ದ್ ಬಿನ್ ಸಅ್‌ಲಬಾ ಗೋತ್ರಗಳ ಕಡೆಗೆ ಕಳುಹಿಸಿದರು. ಅರೇಬಿಯದಲ್ಲಿ ನಡೆದ ಅಹ್‌ಝಾಬ್ ಯುದ್ಧದಂತಹ ಹಿರಿದಾದ ಕಾರ್ಯಾಚರಣೆಯನ್ನು ನಡೆಸಲು ಅವರು ಮುಸ್ಲಿಮರ ವಿರುದ್ಧ ತಪ್ಪಾದ ಪ್ರಚಾರವನ್ನು ಮಾಡುತ್ತಾ ಜನರನ್ನು ಒಟ್ಟುಗೂಡಿಸಲು ಪ್ರಾರಂಭಿಸಿದ್ದರು. ಹಝ್ರತ್ ಪೈಗಂಬರ್(ಸ) ಅವರನ್ನು ನೂರ ಮೂವತ್ತು ಸಹಾಬಿಯರೊಂದಿಗೆ ಕಳುಹಿಸಿದರು. ಹಝ್ರತ್ ಪೈಗಂಬರ್(ಸ)ರ ಸ್ವತಂತ್ರಗೊಂಡ ಗುಲಾಮ ಹಝ್ರತ್ ಯಸಾರ್ ಅವರ ಗೈಡ್ ಆಗಿದ್ದರು. ಮುಸ್ಲಿಮರು ಒಟ್ಟಾಗಿ ಅವರ ಮೇಲೆ ದಾಳಿ ಮಾಡಿದರು ಮತ್ತು ಅವರ ವಸತಿಗಳ ನಡುವೆಯೂ ತಲುಪಿದರು. ಅವರಲ್ಲಿ ಹೋರಾಡಲು ಬಂದವರನ್ನು ವಧಿಸಲಾಯಿತು. ಯುದ್ಧ ಸಂಪತ್ತಿನಿಂದ ಕುರಿ ಮತ್ತು ಮೇಕೆಗಳನ್ನು ಮದೀನಕ್ಕೆ ತರಲಾಯಿತು. ಯಾರನ್ನೂ ಸೆರೆಹಿಡಿಯಲಿಲ್ಲ. ಇಬ್ನ್ ಸಅದ್ ಹೀಗೆ ಬರೆದಿದ್ದಾರೆ: ಹಝ್ರತ್

ಉಸಾಮಾ ಬಿನ್ ಝೈದ್(ರ) ಲಾ ಇಲಾಹ ಇಲ್ಲಲ್ಲಾಹ್ ಎಂದು ಹೇಳಿದ ಮಿರ್‌ದಾಸ್ ಬಿನ್ ನಹೀಕ್‌ರನ್ನು ಕೊಂದ ದಂಡೆಯಾತ್ರೆ ಇದಾಗಿದೆ. ಬುಖಾರಿಯಲ್ಲಿ ಈ ಘಟನೆಯ ವಿವರಣೆಯು ಹಝ್ರತ್ ಉಸಾಮಾ ಬಿನ್ ಝೈದ್(ರ)ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ)ರಿಗೆ ಈ ಸುದ್ದಿ ತಲುಪಿದಾಗ, ಹಝ್ರತ್ ಪೈಗಂಬರ್(ಸ) ಹೇಳಿದರು, ಹೇ ಉಸಾಮಾ, ಆತ ಲಾ ಇಲಾಹ ಇಲ್ಲಲ್ಲಾಹ್ ಎಂದು ಹೇಳಿದ ನಂತರವೂ ನೀನು ಆತನನ್ನು ಕೊಂದೆಯಾ? ನಾನು ಹೇಳಿದೆ, ಆತ ತನ್ನನ್ನು ರಕ್ಷಿಸಿಕೊಳ್ಳಲು ಹಾಗೆ ಹೇಳಿದ್ದನು. ಆದರೆ ಹಝ್ರತ್ ಪೈಗಂಬರ್(ಸ) ಅದನ್ನು ಪದೇ ಪದೇ ಹೇಳುತ್ತಲೇ ಇದ್ದರು. ನಾನು ಅಂದು ಮುಸ್ಲಿಂ ಆಗಿರಬಾರದಿತ್ತು ಎಂದು ನಾನು ಆಶಿಸಿದೆ. ಇಮಾಂ ಮುಸ್ಲಿಂ ಈ ವರದಿಯನ್ನು ಹೀಗೆ ದಾಖಲಿಸಿದ್ದಾರೆ: ಅವನು ಹೃದಯದಿಂದ ಹೇಳಿದ್ದಾನೋ ಇಲ್ಲವೋ ಎಂದು ತಿಳಿಯಲು ನೀನು ಅವನ ಹೃದಯವನ್ನು ಏಕೆ ಸೀಳಿ ನೋಡಲಿಲ್ಲ?

(ಹುಝೂರ್ ಹೇಳಿದರು:) ಅಹ್ಮದಿಯರ ಹೃದಯವನ್ನು ಸೀಳಿ ನೋಡಿದ್ದೇವೆಂದು ಇಂದಿನ ಮೌಲ್ವಿಯರು ಭಾವಿಸುತ್ತಾರೆ. ಆದ್ದರಿಂದ ಅಹ್ಮದಿಯರನ್ನು ಶಹೀದ್ ಮಾಡುವುದು ಮತ್ತು ಅವರ ಮೇಲೆ ದೌರ್ಜನ್ಯ ಮಾಡುವುದು ನ್ಯಾಯಸಮ್ಮತವಾಗಿದೆ ಎಂದು ಹೇಳುತ್ತಾರೆ. ಅಲ್ಲಾಹನು ಅವರನ್ನು ಹಿಡಿಗೂಡಲಿ.

ಮಿರ್‌ದಾಸ್‌ನ ಕುಟುಂಬಕ್ಕೆ ಆತನ ದಿಯತ್ (ಪರಿಹಾರ ಧನ) ನೀಡಲು ಮತ್ತು ಆತನ ಆಸ್ತಿಯನ್ನು ಅವರಿಗೆ ಹಿಂದಿರುಗಿಸಲು ಹಝ್ರತ್ ಪೈಗಂಬರ್(ಸ) ಆದೇಶಿಸಿದರು ಎಂಬುದಾಗಿ ಒಂದು ವರದಿಯಲ್ಲಿದೆ. ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ಹೀಗೆ ವಿವರಿಸಿದ್ದಾರೆ: ಹಝ್ರತ್ ಪೈಗಂಬರ್(ಸ)ರಿಗೆ ಈ ಯುದ್ಧದ ಸುದ್ದಿಯನ್ನು ನೀಡಲು ಒಬ್ಬ ಗ್ರಾಮೀಣ ಮದೀನಾಗೆ ತಲುಪಿದಾಗ, ಆತ ಯುದ್ಧದ ಎಲ್ಲ ವಿವರಗಳನ್ನು ಹೇಳುತ್ತಾ ಈ ಘಟನೆಯನ್ನೂ ವಿವರಿಸಿದನು. ಆಗ ಹಝ್ರತ್ ಪೈಗಂಬರ್(ಸ) ಉಸಾಮಾ(ರ)ರನ್ನು ಕರೆದು, ನೀವು ಆ ಮನುಷ್ಯನನ್ನು ಕೊಂದೆಯಾ ಎಂದು ಕೇಳಿದರು? ಅವರು ಹೌದು ಎಂದರು. ಹಝ್ರತ್ ಪೈಗಂಬರ್(ಸ) ಹೇಳಿದರು, ಖಿಯಾಮತ್ ದಿನದಂದು **ಲಾ ಇಲಾಹ ಇಲ್ಲಲ್ಲಾಹ್** ನಿನ್ನ ವಿರುದ್ಧ ಸಾಕ್ಷಿ ಹೇಳುವಾಗ, ನೀನು ಏನು ಮಾಡುವೆ!

(ಹುಝೂರ್ ಹೇಳಿದರು:) ನಾನು ಮೊದಲೇ ಹೇಳಿದಂತೆ, ಪಾಕಿಸ್ತಾನದಲ್ಲಿರುವ ಇಂದಿನ ಈ ಮೌಲ್ವಿಯರು ಮತ್ತು ಅವರ ಶಿಷ್ಯರು ಸ್ವರ್ಗಕ್ಕೆ ಹೋಗುವ ಬಗ್ಗೆ ಮಾತನಾಡುತ್ತಾರೆ, ಅಹ್ಮದಿಯರನ್ನು ಕೊಂದರೆ ಸ್ವರ್ಗಕ್ಕೆ ಹೋಗಬಹುದು ಎಂದು ಹೇಳುತ್ತಾರೆ. ಆದರೆ ಈ ಕೃತ್ಯವು ಅವರನ್ನು ಅಲ್ಲಾಹನ ಶಿಕ್ಷೆಗೆ ಗುರಿಯಾಗಿಸುತ್ತದೆ ಎಂದು ಅವರಿಗೆ ಗೊತ್ತಿಲ್ಲ. ಎಂದಾದರೂ ಅಲ್ಲಾಹನ ಹಿಡಿತ ಅವರ ಮೇಲೆ ಉಂಟಾಗುವುದು.

ಅನಂತರ ಹಝ್ರತ್ ಬಶೀರ್ ಬಿನ್ ಸಅದ್(ರ) ಯೆಮೆನ್ ಮತ್ತು ಜಬಾರ್ ಕಡೆಗೆ ನಡೆಸಿದ ದಂಡೆಯಾತ್ರೆ ಇದೆ. ಈ ದಂಡೆಯಾತ್ರೆ ಹಿಜರಿ 7ರ ಶವ್ವಾಲ್‌ನಲ್ಲಿ ನಡೆಯಿತು. ಗತ್‌ಫಾನಿನ ಒಂದು ಗುಂಪು ಹಝ್ರತ್ ಪೈಗಂಬರ್(ಸ)ರ ವಿರುದ್ಧ ಒಟ್ಟುಗೂಡುತ್ತಿದೆ ಮತ್ತು ಉಯಿನಾ ಬಿನ್ ಹಿಸನ್ ಹಝ್ರತ್ ಪೈಗಂಬರ್(ಸ)ರ ವಿರುದ್ಧ ಅವರಿಗೆ ಸಹಾಯ ಮಾಡಲು ಭರವಸೆ ನೀಡಿದ್ದಾನೆ ಎಂಬ ಸುದ್ದಿ ಹಝ್ರತ್ ಪೈಗಂಬರ್(ಸ)ರಿಗೆ ತಲುಪಿತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ)ರ ಸಲಹೆಯ ಮೇರೆಗೆ ಹಝ್ರತ್ ಬಶೀರ್ ಬಿನ್ ಸಅದ್(ರ)ರನ್ನು ಮತ್ತು ಅವರೊಂದಿಗೆ ಮುನ್ನೂರು ಸಹಾಬಿಯರನ್ನು ಕಳುಹಿಸಿದರು. ಅವರು ಜಬಾರ್ ಎಂಬ ಸ್ಥಳವನ್ನು ತಲುಪಿದಾಗ, ಗ್ರತ್‌ಫಾನಿನ ಜನರು ಈ ಸುದ್ದಿಯನ್ನು ಕೇಳಿ ತಮ್ಮ ಸಂಪತ್ತನ್ನೂ ಜಾನುವಾರುಗಳನ್ನೂ ಬಿಟ್ಟು ತಮ್ಮ ವಾಸಸ್ಥಾನದ ಮೇಲ್ಭಾಗಕ್ಕೆ ಓಡಿಹೋದರು. ಅವರಲ್ಲಿ ಕೇವಲ ಇಬ್ಬರು ಸಿಕ್ಕಿಬಿದ್ದರು, ಅವರನ್ನು ಬಂಧಿಸಲಾಯಿತು. ಸಹಾಬಿಗಳು ಕುರಿ, ಮೇಕೆ ಮತ್ತು ಒಂಟೆಗಳನ್ನು ವಶಪಡಿಸಿಕೊಂಡರು ಮತ್ತು ಕೈದಿಗಳೊಂದಿಗೆ ಮದೀನಾಗೆ ಹಿಂತಿರುಗಿದರು. ಅಲ್ಲಿ ಆ ಇಬ್ಬರು ಕೈದಿಗಳು ಮುಸ್ಲಿಮರಾದರು. ಆಗ ಹಝ್ರತ್ ಪೈಗಂಬರ್(ಸ) ಅವರನ್ನು ತಮ್ಮ ಪ್ರದೇಶಕ್ಕೆ ಹಿಂತಿರುಗಲು ಅನುಮತಿ ಕೊಟ್ಟರು.

ಉಮ್ರತುಲ್ ಖಝಾದ ವಿವರಣೆಯನ್ನು ಹೀಗೆ ನೀಡಲಾಗಿದೆ: ಹಝ್ರತ್ ಪೈಗಂಬರ್(ಸ) ಹಿಜರಿ 7ರ ಧುಲ್‌ಖಅದ್ ತಿಂಗಳಲ್ಲಿ, ಅಂದರೆ ಫೆಬ್ರವರಿ 629ರಲ್ಲಿ, ಉಮ್ರತುಲ್ ಖಝಾಗಾಗಿ ಹೊರಟರು. ಅದರ ಹಿಂದಿನ ವರ್ಷ ಇದೇ ತಿಂಗಳಲ್ಲಿ ಮಕ್ಕಾದ ಮುಶ್ರಿಕರು ಹಝ್ರತ್ ಪೈಗಂಬರ್(ಸ)ರನ್ನು ಉಮ್ರಾ ಮಾಡಲು ಬಿಟ್ಟಿರಲಿಲ್ಲ ಮತ್ತು ಹಝ್ರತ್ ಪೈಗಂಬರ್(ಸ) ಹುದೈಬಿಯಾದಿಂದ ಹಿಂತಿರುಗಿದ್ದರು. ಹೀಗಾಗಿ ಈಗ ಆ ಉಮ್ರದ ಬದಲಿಗಾಗಿ ಹಝ್ರತ್ ಪೈಗಂಬರ್(ಸ) ಹೊರಟರು. ಉಮ್ರಕ್ಕಾಗಿ ಹೊರಡುವ ವಿವರಣೆಯನ್ನು ಹೀಗೆ ನೀಡಲಾಗಿದೆ: ಈ ಉಮ್ರದಲ್ಲಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಎರಡು ಸಾವಿರ ಸಹಾಬಿಯರಿದ್ದರು. ಹಝ್ರತ್ ಪೈಗಂಬರ್(ಸ)ರೊಂದಿಗೆ ಖುರ್ಬಾನಿಗಾಗಿ 60 ಒಂಟೆಗಳಿದ್ದವು. ಹಝ್ರತ್ ಪೈಗಂಬರ್(ಸ) ಸಹಾಬಿಯರ ಗುಂಪಿನೊಂದಿಗೆ ತಲ್ಬಿಯ ಉಚ್ಛರಿಸುತ್ತಾ ಹರಮ್‌ನ ಕಡೆಗೆ ಸಾಗಿದರು, ಖುರ್ಬಾನಿಯ ಜಾನುವಾರುಗಳನ್ನು ಧಿತ್ತವಾದ ಕಡೆಗೆ ಕಳುಹಿಸಿದರು. ಹಝ್ರತ್ ಪೈಗಂಬರ್(ಸ) ತನ್ನ ಒಂಟೆಯಾದ ಖಸ್ವಾದ ಮೇಲೆ ಸವಾರಿ ಮಾಡಿದ್ದರು. ಹಝ್ರತ್ ಪೈಗಂಬರ್(ಸ) ಮಸ್ಜಿದ್ ಹರಾಮ್‌ಗೆ ತಲುಪಿದ ನಂತರ ಇಝ್‌ತಿಬಾ ಮಾಡಿದರು. ಅಂದರೆ ಬಲ ಭುಜ ಮತ್ತು ತೋಳು ಕಾಣುವ ರೀತಿಯಲ್ಲಿ ತಮ್ಮ ಚಾದರವನ್ನು ಹೊದ್ದುಕೊಂಡರು. ಹಝ್ರತ್ ಪೈಗಂಬರ್(ಸ) ಹೀಗೆ

ಹೇಳಿದರು: ಈ ಕಾಫಿರರ ಮುಂದೆ ತಮ್ಮ ಶಕ್ತಿಯನ್ನು ಪ್ರದರ್ಶಿಸುವವರ ಮೇಲೆ ಅಲ್ಲಾಹನು ಕರುಣೆದೋರಲಿ. ಹಝ್ರತ್ ಪೈಗಂಬರ್(ಸ) ತಮ್ಮ ಸಹಾಬಿಯರೊಂದಿಗೆ ತವಾಫಿನ ಮೊದಲ ಮೂರು ಸುತ್ತುಗಳಲ್ಲಿ ಭುಜಗಳನ್ನು ಅಲುಗಾಡಿಸುತ್ತಾ ಚೆನ್ನಾಗಿ ಹೆಮ್ಮೆಯಿಂದ ನಡೆದು ತವಾಫ್ ಮಾಡಿದರು. ಈ ಸಂದರ್ಭದಲ್ಲಿ ಹಝ್ರತ್ ಮೈಮೂನಾ ಬಿನ್ತ್ ಹಾರಿಸ್(ರ)ರೊಂದಿಗೆ ಹಝ್ರತ್ ಪೈಗಂಬರ್(ಸ)ರ ವಿವಾಹದ ಉಲ್ಲೇಖವೂ ಇದೆ. ಹಝ್ರತ್ ಪೈಗಂಬರ್(ಸ) ಮಕ್ಕಾದಲ್ಲಿ ಮೂರು ದಿನಗಳ ಕಾಲ ತಂಗಿದ್ದರು. ನಾಲ್ಕನೇ ದಿನ ಮಕ್ಕಾದವರ ಬೇಡಿಕೆಯ ಮೇರೆಗೆ ಹಝ್ರತ್ ಪೈಗಂಬರ್(ಸ) ಬೇಗನೇ ಎಲ್ಲ ಸಹಾಬಿಯರೊಂದಿಗೆ ಮಕ್ಕಾದಿಂದ ಹೊರಟರು.

ಈ ಪ್ರಯಾಣದಲ್ಲಿ ಹಝ್ರತ್ ಹಮ್ಝ(ರ)ರ ಪುತ್ರಿಯ ಘಟನೆಯೂ ಇದೆ. ಹಝ್ರತ್ ಪೈಗಂಬರ್(ಸ) ಮಕ್ಕಾದಿಂದ ಹೊರಟಾಗ ಹಝ್ರತ್ ಹಮ್ಝ(ರ)ರ ಮಗಳು, ಹೇ ನನ್ನ ಚಿಕ್ಕಪ್ಪ! ಹೇ ನನ್ನ ಚಿಕ್ಕಪ್ಪ! ಎಂದು ಅಳುತ್ತಾ ಹಝ್ರತ್ ಪೈಗಂಬರ್(ಸ) ಹಿಂದೆ ಬಂದಳು. ಆಗ ಹಝ್ರತ್ ಅಲಿ(ರ) ಆಕೆಯನ್ನು ಕರೆದುಕೊಂಡು ಆಕೆಯ ಕೈ ಹಿಡಿದು ಹಝ್ರತ್ ಫಾತಿಮಾ(ರ)ರೊಡನೆ ಚಿಕ್ಕಪ್ಪನ ಮಗಳನ್ನು ಕರೆದುಕೊಂಡು ಹೋಗಲು ಹೇಳಿದರು. ಅವರು ಆಕೆಯನ್ನು ಒಂಟೆಯ ಮೇಲೆ ಕೂರಿಸಿಕೊಂಡರು. ಹಝ್ರತ್ ಅಲಿ(ರ), ಹಝ್ರತ್ ಝೈದ್(ರ) ಮತ್ತು ಹಝ್ರತ್ ಜಾಫರ್(ರ) ಆಕೆಯ ಬಗ್ಗೆ ಜಗಳವಾಡಿದರು. ಆಗ ಹಝ್ರತ್ ಪೈಗಂಬರ್(ಸ) ಆಕೆಯ ತಾಯಿಯ ಸಹೋದರಿ ಪರವಾಗಿ ತೀರ್ಪು ನೀಡಿದರು ಮತ್ತು ತಾಯಿಯ ಸಹೋದರಿ ತಾಯಿಯ ಸ್ಥಾನದಲ್ಲಿ ಇರುತ್ತಾರೆ ಎಂದು ಹೇಳಿದರು. ನೀವು ಹಝ್ರತ್ ಹಮ್ಝ(ರ)ರ ಮಗಳನ್ನು ಮದುವೆಯಾಗುವುದಿಲ್ಲವೇ? ಎಂದು ಹಝ್ರತ್ ಅಲಿ(ರ) ಕೇಳಿದರು. ಆಗ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಅವಳು ನನ್ನ ಮಲತಾಯಿಯ ಸಹೋದರನ ಮಗಳು, ಈ ಸಂಬಂಧದಲ್ಲಿ ವಿವಾಹವಾಗಲು ಸಾಧ್ಯವಿಲ್ಲ. ಹಝ್ರತ್ ಪೈಗಂಬರ್(ಸ) ಧುಲ್‌ಹಿಜ್ಜಾ ತಿಂಗಳಲ್ಲಿ ಮದೀನಾಗೆ ಹಿಂತಿರುಗಿದರು.

ಇನ್ನೊಂದು ಕಾರ್ಯಾಚರಣೆ ಅಖ್ರಮ್ ಬಿನ್ ಉಬಯ್ ಔಜಾ(ರ) ಬನೂ ಸುಲೈಮ್ ಕಡೆಗೆ ನಡೆಸಿದ ದಂಡೆಯಾತ್ರೆಯಾಗಿದೆ. ಈ ದಂಡೆಯಾತ್ರೆ ಹಿಜರಿ 7ರ ಧುಲ್‌ಹಿಜ್ಜಾದಲ್ಲಿ ನಡೆಯಿತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಖ್ರಮ್(ರ)ರನ್ನು ಐವತ್ತು ಜನರೊಂದಿಗೆ ಮದೀನಾದ ಸಮೀಪ ವಾಸಿಸುತ್ತಿದ್ದ ಬನೂ ಸುಲೈಮ್ ಕಡೆಗೆ ಕಳುಹಿಸಿದರು. ಬನೂ ಸುಲೈಮ್‌ನ ಒಬ್ಬ ಗೂಢಚಾರ ಅವರೊಂದಿಗೆ ಇದ್ದನು. ಅವನು ಮುಂದೆ ಹೋಗಿ ತನ್ನ ಜನಾಂಗವನ್ನು ಎಚ್ಚರಿಸಿದನು ಮತ್ತು ಅವರು ಒಂದು ದೊಡ್ಡ ಸೈನ್ಯವನ್ನು ಒಟ್ಟುಗೂಡಿಸಿದರು. ಹಝ್ರತ್ ಅಖ್ರಮ್(ರ) ಅವರ ಬಳಿಗೆ ತಲುಪಿದಾಗ, ಬನೂ ಸುಲೈಮ್ ಗೋತ್ರದವರು ಅವರೊಂದಿಗೆ ಹೋರಾಡಲು ಸಿದ್ಧರಿದ್ದರು. ಅವರು ಅವರಿಗೆ ಇಸ್ಲಾಮಿನ ಸಂದೇಶವನ್ನು ನೀಡಿದರು. ಆದರೆ ಅವರು ಅದನ್ನು ನಿರಾಕರಿಸಿದರು. ಅನಂತರ ಎರಡೂ ಕಡೆಯಿಂದ ಸ್ವಲ್ಪ ಹೊತ್ತು ಬಾಣಗಳ ಸುರಿಮಳೆಯಾಯಿತು. ಈ ಸಮಯದಲ್ಲಿ ಬನೂ ಸುಲೈಮ್ ಗೋತ್ರಕ್ಕೆ ಮತ್ತಷ್ಟು ಸಹಾಯ ಲಭಿಸಿತು. ಅವರು ಮುಸ್ಲಿಮರನ್ನು ಎಲ್ಲ ಕಡೆಯಿಂದ ಸುತ್ತುವರೆದರು. ಮುಸ್ಲಿಮರು ಬಹಳ ಶಕ್ತವಾಗಿ ಹೋರಾಡಿದರು. ಆದರೆ ಅವರಲ್ಲಿ ಹೆಚ್ಚಿನವರು ಶಹೀದ್ ಆದರು ಮತ್ತು ಹಝ್ರತ್ ಅಖ್ರಮ್(ರ) ಕೂಡ ತೀವ್ರವಾಗಿ ಗಾಯಗೊಂಡು ಶಹೀದ್ ಆದವರೊಂದಿಗೆ ಬಿದ್ದರು. ಅನಂತರ ಸಫರ್ 8ರ ಮೊದಲನೆಯ ದಿನ ಹಝ್ರತ್ ಪೈಗಂಬರ್(ಸ)ರ ಬಳಿಗೆ ತಲುಪಿದರು.

ಹಝ್ರತ್ ಗ್ಹಾಲಿಬ್ ಬಿನ್ ಅಬ್ದುಲ್ಲಾ ಲೈಸಿ(ರ) ಕದೀದ್ ಕಡೆಗೆ ನಡೆಸಿದ ದಂಡೆಯಾತ್ರೆದ ಉಲ್ಲೇಖವಿದೆ. ಹಝ್ರತ್ ಪೈಗಂಬರ್(ಸ) ಅವರನ್ನು ಹಿಜರಿ 8ರ ಸಫರ್‌ನಲ್ಲಿ ಕದೀದ್‌ನಲ್ಲಿ ವಾಸಿಸುತ್ತಿದ್ದ ಬನೂ ಲೈಸ್‌ನ ಶಾಖೆಯಾದ ಬನೂ ಮುಲವ್ವಿಹ್‌ನ ಕಡೆಗೆ ಹದಿನೈದು ಜನರೊಂದಿಗೆ ಕಳುಹಿಸಿದರು. ಈ ದಂಡೆಯಾತ್ರೆಯಲ್ಲಿ ಮುಸ್ಲಿಮರ ಘೋಷಣೆ "**ಅಮಿತ್ ಅಮಿತ್**" ಎಂದಾಗಿತ್ತು.

(ಈ ದಂಡೆಯಾತ್ರೆಯ ಸಂಕ್ಷಿಪ್ತ ವಿವರಣೆಯನ್ನು ನೀಡಿದ ನಂತರ ಹುಝೂರ್ ಹೇಳಿದರು:) ಈ ವಿಷಯ ಮುಂದುವರಿಯುವುದು. ಈಗ ನಾನು ಪಾಕಿಸ್ತಾನದ ಅಹ್ಮದಿಯರಿಗಾಗಿಯೂ ವಿಶೇಷವಾಗಿ ಪ್ರಾರ್ಥನೆ ಮಾಡಲು ಹೇಳಲು ಬಯಸುತ್ತೇನೆ. ನಾನು ಹೇಳಿದಂತೆ ದರೂದ್ ಕಡೆಗೆ ಗಮನ ನೀಡಬೇಕು. ದಿನಕ್ಕೆ ಇನ್ನೂರು ಬಾರಿ **ಸುಬ್‌ಹಾನಲ್ಲಾಹಿ ವಬಿ ಹಮ್‌ದಿಹಿ ಸುಬ್‌ಹಾನಲ್ಲಾಹಿಲ್ ಅಝೀಮ್ ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್** ಎಂದು ಹೇಳಬೇಕು. ಈಗ ಇದಕ್ಕೆ ಎಷ್ಟು ಗಮನ ನೀಡಲು ಸಾಧ್ಯವೋ ಅಷ್ಟು ನೀಡಬೇಕು. ನಾವು ದುಆದ ಹಕ್ಕನ್ನು ನಿರ್ವಹಿಸುತ್ತಾ ದುಆಗಳಿಗೆ ಗಮನ ನೀಡಿದರೆ ಮಾತ್ರ ಯಶಸ್ಸು ಲಭಿಸುವುದು. ನೀಡಬೇಕಾದ ಗಮನವನ್ನು ನೀಡಲಾಗುತ್ತಿಲ್ಲ. ಕೇವಲ ದುಆಗಳಿಂದ ಏನೂ ಆಗದು, ಬೇರೆ ಏನಾದರೂ ಮಾಡಬೇಕು ಎಂದು ಕೆಲವರು ಹೇಳುತ್ತಾರೆ. ಕೆಲವರು ನನಗೂ ಬರೆಯುತ್ತಾರೆ. ಬೇರೆ ಏನು ಮಾಡಬೇಕು. ನಮ್ಮ ಆಯುಧ ಕೇವಲ ದುಆ ಆಗಿದೆ. ಈ ಬಗ್ಗೆ ನಾನು ಹಲವು ಬಾರಿ ವಿವರಿಸಿದ್ದೇನೆ. ಹಝ್ರತ್ ಮಸೀಹ್ ಮೌಊದ್(ಅ)ರ ಉಲ್ಲೇಖಗಳನ್ನು ಹೇಳಿದ್ದೇನೆ. ದುಆಗಳಿಂದ ಏನೂ ಆಗುವುದಿಲ್ಲ ಎಂಬುದು ಅತ್ಯಂತ ತಪ್ಪು ಕಲ್ಪನೆಯಾಗಿದೆ. ಹೇಗಿದ್ದರೂ, ಪ್ರಾರ್ಥನೆಗಳೇ ನಮ್ಮ ಯಶಸ್ಸು ಆಗಿದೆ. ಅಲ್ಲಾಹನು ಎಲ್ಲರಿಗೂ ಅದರ ಸೌಭಾಗ್ಯ ನೀಡಲಿ ಮತ್ತು ನಾವು ದುಆದ ಹಕ್ಕನ್ನು ನಿರ್ವಹಿಸುವವರಾಗೋಣ. ಕೇವಲ ಪ್ರಾರ್ಥನೆಗಳಿಂದ ಏನೂ ಆಗುವುದಿಲ್ಲ ಎಂದು ನಾವು ಹೇಳಿದರೆ ಮತ್ತು ಅದರ ಹಕ್ಕನ್ನು ನಿರ್ವಹಿಸದಿದ್ದರೆ, ಅದು ನಾವು ಅಲ್ಲಾಹನೊಡನೆ ಮಾಡುವ ತಪ್ಪು ದೂರು ಆಗುವುದು. ಆದ್ದರಿಂದ ನಾವು ಅದಕ್ಕಾಗಿ ಅವನೊಡನೆ ಕ್ಷಮೆಯನ್ನೂ

ಯಾಚಿಸಬೇಕು. ಇಂದು ಕರಾಚಿಯಲ್ಲಿ ಒಂದು ಘಟನೆ ನಡೆದಿದೆ. ಭಯೋತ್ಪಾದಕರು ಇಸ್ಲಾಮಿನ ಹೆಸರಿನಲ್ಲಿ ನಮ್ಮ ಮಸೀದಿಯ ಮೇಲೆ ದಾಳಿ ಮಾಡಿದ್ದಾರೆ. ಒಬ್ಬ ಅಹ್ಮದಿಯನ್ನು ಶಹೀದ್ ಮಾಡಿದ್ದಾರೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅದರ ಸಂಪೂರ್ಣ ವಿವರ ಇನ್ನೂ ಲಭ್ಯವಾಗಿಲ್ಲ. ವಿವರ ಬಂದ ನಂತರ ವಿವರಿಸಲಾಗುವುದು ಇನ್‌ಶಾ ಅಲ್ಲಾಹ್. ಅಲ್ಲಾಹನು ಈ ದುಷ್ಟರನ್ನು ಶೀಘ್ರದಲ್ಲೇ ಹಿಡಿಗೂಡಲಿ.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis[(atba)]***

At, ***'Masjid Mubarak',*** *Islamabad*, *Tilford*, U.K. On 18-04-2025

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon